ಬರೆಸಿದಳು.

ಎರಡು ದಿನಗಳ ನಂತರ ಕೃಷ್ಣಪ್ಪ ಬ್ಯಾಂಕಿಗೆ ಹಾಜರಾದಾಗ ಏನೋ ಬದಲಾವಣೆ ಕಂಡಿತು. ರಾಜು ಮುಖ ತಪ್ಪಿಸಿಕೊಂಡು ಓಡಾಡುತ್ತಿದ್ದ. ಸೇತು ಮಾಧವ್ ತುಂಬಾ ವಿನಯದಿಂದ ವರ್ತಿಸುತ್ತಿದ್ದರು. ಉಳಿದವರಲ್ಲೂ ಒಂದು ಥರದ ಚಡಪಡಿಕೆಯನ್ನು ಗುರುತಿಸಿದರು. ಎಂದಿನ ಲವಲವಿಕೆ ಇರಲಿಲ್ಲ. ಕೃಷ್ಣಪ್ಪರ ಹೆಸರಿಗೆ ರಿಜಿಸ್ಟರ್ ಪೋಸ್ಟ್ ಬಂತು. ಚಾರ್ಜ್‌ಶೀಟ್ ಹಾಕಿದ್ದರು. ಸಾಲ ಪಡೆದವರೊಬ್ಬರು ಮ್ಯಾನೇಜರ್ ಖಾತೆಗೆ ಜಮಾ ಮಾಡಿದ್ದು ಮುಖ್ಯ ಆಪಾದನೆಯಾಗಿತ್ತು. ವೈಯಕ್ತಿಕ ಖಾತೆಯಲ್ಲಿ ಇತರ ವ್ಯವಹಾರ ನಡೆಸುವಂತಿಲ್ಲ. ಅಂತಹ ಸಂದರ್ಭ ಬಂದರೆ ಮೇಲಧಿಕಾರಿಗಳಿಗೆ ತಿಳಿಸಬೇಕು. ಈ ಪ್ರಕರಣದಲ್ಲಿ ಮ್ಯಾನೇಜರ್ ಸಾಲಗಾರರಿಂದ ಅನುಕೂಲ ಪಡೆಯಲು ಬಯಸಿದ್ದಾರೆಂದು ಏಕೆ ತಿಳಿಯಬಾರದು ಎಂದು ಪ್ರಶ್ನಿಸಲಾಗಿತ್ತು. ಇದಲ್ಲದೆ ಔಚಿತ್ಯ ಮೀರಿ ಮ್ಯಾನೇಜರ್ ಓರ್ವ ವ್ಯಕ್ತಿಗೆ ಅನುಕೂಲ ಮಾಡಿಕೊಟ್ಟದ್ದಾರೆಂದೂ, ಇದು ಮ್ಯಾನೇಜರ್ ಸ್ಥಾನದ ದುರ್ಬಳಕೆಯಲ್ಲವೇ ಎಂದು ಪ್ರಶ್ನಿಸಿ ನಿಮ್ಮ ಕೃತ್ಯಗಳು ಬ್ಯಾಂಕಿನ ಪ್ರತಿಷ್ಠೆಗೆ ಧಕ್ಕೆ ತರುವ ರೀತಿಯಲ್ಲಿವೆ ಎಂದು ಆಪಾದಿಸಿ, ಸಮಜಾಯಿಸಿ ನೀಡಲು ತಿಳಿಸಲಾಗಿತ್ತು.

ಚಾರ್ಜ್‌ಶೀಟನ್ನು ಓದಿ ಕೃಷ್ಣಪ್ಪಗೆ ಖೇದವಾಯಿತು. ಆರೋಪಗಳ ಬಗ್ಗೆ ನಗು ಬಂತು. ಸಾವಿತ್ರಿ ಹಣ ಕಟ್ಟಿದ್ದು ತಪ್ಪೆನಿಸಲಿಲ್ಲ. ಹಣ ಕೊಡಲು ಬಂದಿದ್ದಾಳೆ. ಅಕೌಂಟಿಗೆ ಹಾಕಲು ಯಾರೋ ಹೇಳಿದ್ದಾರೆ. ಅದನ್ನು ಅಪರಾಧವೆನ್ನುವಂತೆ ಬಿಂಬಿಸಿದ್ದು ನೋವು ಉಂಟು ಮಾಡಿತು. ಬ್ಯಾಂಕಿನ ಪ್ರತಿಷ್ಠೆಗೆ ಧಕ್ಕೆಯಾಗಿದೆ ಎನ್ನುವುದು ಅಸಮಂಜಸವೆಂದು ತೋರಿತು. ಪ್ರಾದೇಶಿಕ ಕಚೇರಿಗೆ ತಿಳಿಸಿದವರು ಯಾರು, ತನಿಖಾಧಿಕಾರಿಗಳು ಏಕೆ ತರಾತುರಿಯಲ್ಲಿ ಬಂದರು ಎಂದು ತಿಳಿದುಕೊಳ್ಳುವುದರಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಒಬ್ಬೊಬ್ಬರನ್ನೇ ಕರೆದು ಕೇಳಿದರೆ ತಿಳಿಯುತ್ತಿತ್ತು. ಅದರಿಂದ ವಾತಾವರಣ ಕೆಡುವುದು ಸರಿ ಎನ್ನಿಸಲಿಲ್ಲ.

ಪ್ರತಿ ತಿಂಗಳು ಕರೆಯುವಂತೆ ಸ್ಟಾಫ್ ಮೀಟಿಂಗ್ ಕರೆದಾಗ ಇತರೆಲ್ಲ ವಿಷಯಗಳ ನಡುವೆ ಚಾರ್ಜ್‌ಶೀಟ್ ಇಶ್ಯೂ ಆಗಿದ್ದನ್ನು ಹೇಳಿದರು. ಯಾರಿಂದಲೂ ಪ್ರತಿಕ್ರಿಯೆ ಬರಲಿಲ್ಲ. ಕೆಲವರು ಆಶ್ಚರ್ಯವಾದಂತೆ ನಟಿಸಿದರು. ಕೃಷ್ಣಪ್ಪ 'ನನಗಿದರಿಂದ ದುಃಖವೇನೂ ಆಗಿಲ್ಲ. ಎಲ್ಲವನ್ನೂ ಮುಚ್ಚು ಮರೆ ಇಲ್ಲದೆ ಮಾಡಿದ್ದೇನೆ. ನನ್ನ ಉದ್ದೇಶ ನೀವು ಅರ್ಥ ಮಾಡಿಕೊಳ್ಳುತ್ತೀರೆಂದು ತಿಳಿದಿದ್ದೆ. ಇದರಿಂದ ಯಾರಿಗೇನು ಲಾಭವೋ ಗೊತ್ತಿಲ್ಲ. ಯಾರಿಗಾದರೂ ಸಂತೋಷವಾಗಿದ್ದರೆ ಒಳ್ಳೆಯದೇ. ಇರಲಿ, ಇಂತದ್ದೆಲ್ಲ ಇರುತ್ತದೆ. ಏನಾಗುತ್ತದೋ ಅದನ್ನು ನಾನು ಅನುಭವಿಸುತ್ತೇನೆ' ಎಂದರು. ಅವರ ಮಾತಿಗೆ ಕೆಲವರು ತಲೆ ತಗ್ಗಿಸಿದರು. ತೀರಾ ನೊಂದುಕೊಳ್ಳದಿದ್ದರೂ ಕೃಷ್ಣಪ್ಪಗೆ ಬೇಸರವಂತೂ ಆಗಿತ್ತು. ತಾನು ತಪ್ಪು ಮಾಡಿದ್ದೇನೆಯೇ ಎಂದು ಯೋಚಿಸಿದರು. ಸಾವಿತ್ರಿಯ ಚಂದ ಸೆಳೆದಿದ್ದು ನಿಜ. ಒಮ್ಮೆ ಕನಸಲ್ಲಿ ಸಾವಿತ್ರಿ ಬಂದು ನಿಕ್ಕರ್ ಒದ್ದೆಯಾದ ಕ್ಷಣದಲ್ಲಿ ಎಚ್ಚರವಾಗಿತ್ತು. ಇಂತಹ ಯೋಚನೆ ಬರಬಾರದೆಂದು ಮನಸ್ಸು ಗಟ್ಟಿ ಮಾಡಿಕೊಂಡಿದ್ದರು.

ಹಸು ಸತ್ತಾಗ ಅವಳ ಗೋಳಾಟವನ್ನು ಸಹಿಸಲಾಗುತ್ತಿರಲಿಲ್ಲ. ಬೆನ್ನ ಮೇಲೆ ಕೈಹಾಕಿ ಸಮಾಧಾನ ಮಾಡಲು ಮುಂದಾದವರು ತಕ್ಷಣ ಎಚ್ಚೆತ್ತಿದ್ದರು. ಮಗಳು ಮನೆಯೊಳಗೆ ಬನ್ನಿ ಎಂದು ಕರೆದಾಗ ಯಾವಾಗಲೂ ತಲೆ ತಗ್ಗಿಸಿ ಮಾತನಾಡುವ ಸಾವಿತ್ರಿ ಕೃಷ್ಣಪ್ಪನವರನ್ನೇ ನೋಡುತ್ತಿದ್ದಳು. ಕಣ್ಣುಗಳಲ್ಲಿ ವಿಲಕ್ಷಣ ಆಕರ್ಷಣೆ ಇತ್ತು. ಮನೆಯೊಳಗೆ ಹೋಗಲೇ ಅಂದುಕೊಂಡವರು ಮನಸ್ಸನ್ನು ತಹಬಂದಿಗೆ ತಂದುಕೊಂಡಿದ್ದರು. ಕೃಷ್ಣಪ್ಪ ಚಾರ್ಜ್‌ಶೀಟಿಗೆ ಉತ್ತರಿಸಿದರು. ಉತ್ತರಿಸುವಾಗ ಅಸೋಸಿಯೇಶನ್‌ನ ಕಾರ್ಯದರ್ಶಿಯ ಸಹಾಯವನ್ನೂ ಪಡೆದರು. ಸದುದ್ದೇಶದಿಂದ ಸಹಾಯ ಮಾಡಿದ್ದೆ; ಬ್ಯಾಂಕಿನ ಹೆಸರಿಗೆ ಹಾನಿ ತರುವ ಕೆಲಸ ಮಾಡಿಲ್ಲ ಎಂದು ನಿವೇದಿಸಿಕೊಂಡರು.

ನಿರೀಕ್ಷೆಯಂತೆ ಕೃಷ್ಣಪ್ಪರ ಅಹವಾಲನ್ನು ಬ್ಯಾಂಕ್ ಆಡಳಿತ ಒಪ್ಪಿಕೊಳ್ಳಲಿಲ್ಲ. ವಿಚಾರಣೆಗೆ ಹಾಜರಾಗಲು ತಿಳಿಸಲಾಯಿತು. ವಿಚಾರಣೆಯ ದಿನ ಅವರ ಕೃತ್ಯಗಳನ್ನು ಸಮರ್ಥಿಸುವ ಪುರಾವೆಗಳನ್ನು ಒದಗಿಸಬಹುದೆಂದೂ, ಸಾಕ್ಷಿಗಳನ್ನು ಹಾಜರು ಪಡಿಸಬಹುದೆಂದೂ ತಿಳಿಸಲಾಯಿತು. ತನ್ನ ಖಾತೆಯಲ್ಲಿ ಆ ತನಕ ಯಾವುದೇ ಅನುಚಿತ ವ್ಯವಹಾರಗಳು ನಡೆದಿಲ್ಲವೆಂದು ಸಾಬೀತು ಪಡಿಸಲು